ಕರ್ನಾಟಕ ಸರ್ಕಾರ
ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12
E-mail : Commissioner.pue@gmail.com. Ph.No. : 23361857, 23361858 Fax : 23361852

ಸಂಖ್ಯೆ : ಪಪೂಶಿಇ/ಶೈಶಾ/ರೆ.ಕ್ರಾಸ್.ಘ/2021-22 ದಿನಾಂಕ : 19-01-2022

## ಜ್ಞಾಪನ

**ವಿಷಯ** : ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಪದವಿ ಪೂರ್ವ ಕಾಲೇಜುಗಳಲ್ಲಿ ಕಿರಿಯ ರೆಡ್ ಕ್ರಾಸ್ ಘಟಕಗಳನ್ನು ಪ್ರಾರಂಭಿಸುವ ಬಗ್ಗೆ.

**ಉಲ್ಲೇಖ** : 1. ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಕರ್ನಾಟಕ ರವರ ಪತ್ರದ ಸಂಖ್ಯೆ : IRCS/IRC/PUCGO/1907/2020-21 ದಿನಾಂಕ : 19-02-2021.

2. ಈ ಕಛೇರಿ ಪತ್ರ ಸಂಖ್ಯೆ : ಪಪೂಶಿಇ/ಶೈಶಾ/ರೆ.ಕ್ರಾಸ್.ಘ/2021-22 ದಿನಾಂಕ : 07-08-2021.

3. ಸರ್ಕಾರದ ಆದೇಶ ಸಂಖ್ಯೆ : ಇಪಿ 218 ಎಸ್‌ಹೆಚ್‌ಹೆಚ್ 2021 ಬೆಂಗಳೂರು. ದಿನಾಂಕ : 04-01-2022.

********

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಉಲ್ಲೇಖ 01ರ ಪತ್ರದಲ್ಲಿ ಕರ್ನಾಟಕದಲ್ಲಿರುವ ಎಲ್ಲಾ ಪದವಿ ಪೂರ್ವ ಕಾಲೇಜುಗಳಲ್ಲಿ, ಕಿರಿಯ ರೆಡ್ ಕ್ರಾಸ್ ಘಟಕಗಳನ್ನು ಸ್ಥಾಪಿಸಲು ಪದವಿ ಪೂರ್ವ ಶಿಕ್ಷಣ ಇಲಾಖೆಯಿಂದ ಆದೇಶ ಹೊರಡಿಸಬೇಕೆಂದು ಶ್ರೀ ಎಸ್ ನಾಗಣ್ಣ, ಸಭಾಪತಿ, ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆ, ಬೆಂಗಳೂರು, ಇವರು ಕೋರಿರುತ್ತಾರೆ. ಈ ಸಂಬಂಧವಾಗಿ ಉಲ್ಲೇಖ 02ರ ಪತ್ರದಲ್ಲಿ ಎಲ್ಲಾ ಪದವಿ ಪೂರ್ವ ಕಾಲೇಜುಗಳಲ್ಲಿ, ಕಿರಿಯ ರೆಡ್ ಕ್ರಾಸ್ ಘಟಕಗಳನ್ನು ಸ್ಥಾಪಿಸಲು ಸರ್ಕಾರದ ಹಂತದಲ್ಲಿ ನಿರ್ಣಯಿಸಿ ಆದೇಶಹೊರಡಿಸಬೇಕಾಗಿರುವುದರಿಂದ ದಿನಾಂಕ : 07-08-2021 ರಂದು ಸರ್ಕಾರಕ್ಕೆ ಪತ್ರವನ್ನು ಕಳುಹಿಸಲಾಗಿರುತ್ತದೆ.

ಮುಂದುವರೆದು, ಉಲ್ಲೇಖ 03 ಸರ್ಕಾರದ ಆದೇಶ ಸಂಖ್ಯೆ : ಇಪಿ 218 ಎಸ್‌ಹೆಚ್‌ಹೆಚ್ 2021 ಬೆಂಗಳೂರು, ದಿನಾಂಕ : 04-01-2022ರನ್ವಯ ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಪದವಿ ಪೂರ್ವ ಕಾಲೇಜುಗಳಲ್ಲಿ ಕಿರಿಯ ರೆಡ್ ಕ್ರಾಸ್ ಘಟಕಗಳನ್ನು ಪ್ರಾರಂಭಿಸಲು ಕಿರಿಯ ರೆಡ್ ಕ್ರಾಸ್ ವಿಭಾಗಕ್ಕೆ ವಾರ್ಷಿಕವಾಗಿ ರೂ.100/-ಗಳನ್ನು (ನೂರು ರೂಪಾಯಿಗಳು ಮಾತ್ರ) ಸದಸ್ಯತ್ವ ಶುಲ್ಕವಾಗಿ ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆ, ಬೆಂಗಳೂರು ಇಲ್ಲಿ ಪಾವತಿಸಿ ನೋಂದಾಯಿಸಿಕೊಳ್ಳುವುದು. ರಾಜ್ಯದ ಎಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರತಿಯೊಬ್ಬ ವಿದ್ಯಾರ್ಥಿಯಿಂದ ರೂ.25/-ಗಳನ್ನು (ಇಪ್ಪತ್ತೈದು ರೂಪಾಯಿಗಳು ಮಾತ್ರ)

....2

ರೆಡ್ ಕ್ರಾಸ್ ಶುಲ್ಕವಾಗಿ ಸಂಗ್ರಹಿಸಿ, ಅದರಲ್ಲಿ ರೂ.10/-ಗಳನ್ನು (ಹತ್ತು ರೂಪಾಯಿಗಳು ಮಾತ್ರ) ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಕರ್ನಾಟಕ ರಾಜ್ಯ ಶಾಖೆ, ಬೆಂಗಳೂರು-560001 ಇಲ್ಲಿಗೆ ಕಳುಹಿಸಿಕೊಡುವಂತೆ ಹಾಗೂ ರೂ.15/-ಗಳನ್ನು (ಹದಿನೈದು ರೂಪಾಯಿಗಳು ಮಾತ್ರ) ಕಿರಿಯ ರೆಡ್ ಕ್ರಾಸ್ ಚಟುವಟಿಕೆಗಳಿಗಾಗಿ ಪದವಿ ಪೂರ್ವ ಕಾಲೇಜುಗಳಲ್ಲಿಯೇ ಉಳಿಸಿಕೊಳ್ಳಲು ಸರ್ಕಾರವು ಮಂಜೂರಾತಿಯನ್ನು ನೀಡಿ ಆದೇಶಿಸಿದೆ.

ಸಂಗ್ರಹಿಸಲಾದ ಶುಲ್ಕದ ಲೆಕ್ಕಪತ್ರಗಳನ್ನು ರಸೀದಿ ಪುಸ್ತಕಗಳೊಂದಿಗೆ ಇಲಾಖೆಯ ನಿಯಾಮಾನುಸಾರ ಸೂಕ್ತ ರೀತಿಯಲ್ಲಿ ನಿರ್ವಹಿಸಲು ಸೂಚಿಸಿದೆ. ರೆಡ್ ಕ್ರಾಸ್ ಚಟುವಟಿಕೆಗಳು, ಇಲಾಖೆ ಸೂಚಿಸಿರುವ ಚಟುವಟಿಕೆಗಳು ಮತ್ತು ಇನ್ನಿತರೆ ಚಟುವಟಿಕೆಗಳನ್ನು ಪ್ರಸ್ತುತ ಕೋವಿಡ್ ಪರಿಸ್ಥಿತಿಯಲ್ಲಿ ಕೋವಿಡ್ ಮುಂಜಾಗ್ರತಾ ಕ್ರಮಗಳನ್ನು ಪಾಲಿಸಿಕೊಂಡು ಸಣ್ಣ ಪ್ರಮಾಣದಲ್ಲಿ ನಡೆಸಬೇಕೆಂದು ತಿಳಿಸಿದೆ.

ಮಾನ್ಯ ನಿರ್ದೇಶಕರ ಆದೇಶದ ಮೇರೆಗೆ.

R Kusum
19/01/2022
ಜಂಟಿ ನಿರ್ದೇಶಕರು (ಶೈಕ್ಷಣಿಕ)
ಪದವಿ ಪೂರ್ವ ಶಿಕ್ಷಣ ಇಲಾಖೆ

ಪ್ರತಿಗಳು :

1. ಇಂಡಿಯನ್ ರೆಡ್ ಕ್ರಾಸ್ ಸೊಸೈಟಿ, #26, ರೆಡ್ ಕ್ರಾಸ್ ಭವನ್, 1ನೇ ಮಹಡಿ, ರೇಸ್ ಕೋರ್ಸ್ ರೋಡ್, ಬೆಂಗಳೂರು-560001.
2. ನಿರ್ದೇಶಕರ ಆಪ್ತ ಶಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ ಬೆಂಗಳೂರು.
3. ರಾಜ್ಯದ ಎಲ್ಲಾ ಜಿಲ್ಲಾ ಉಪ ನಿರ್ದೇಶಕರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
4. ಸಹಾಯಕ ನಿರ್ದೇಶಕರು, ಇ-ಆಡಳಿತ, ಪದವಿ ಪೂರ್ವ ಶಿಕ್ಷಣ ಇಲಾಖೆ ಬೆಂಗಳೂರು. ಇವರಿಗೆ ಇಲಾಖಾ ಜಾಲತಾಣದಲ್ಲಿ ಅಳವಡಿಸಲು ಹಾಗೂ ರಾಜ್ಯದ ಎಲ್ಲಾ ಉಪನಿರ್ದೇಶಕರುಗಳ ಇ-ಮೇಲ್ ವಿಳಾಸಕ್ಕೆ ಕಳುಹಿಸಲು.
5. ಕಛೇರಿ ಪ್ರತಿ.